# ಪ್ರಜಾವಾಣಿ

**Monday, October 24th, 2011**




*ಬೆಂಗಳೂರಿನ ಜೈನ್ ವಿವಿ ವಿದ್ಯಾರ್ಥಿ ವರುಣ್*

# ಚೊಚ್ಚಲ ಪಂದ್ಯದಲ್ಲೇ ಯಶಸ್ಸು


ಪ್ರಜಾವಾಣಿ ವಾರ್ತೆ


ಮುಂಬೈ: 'ವೇಗವಾಗಿ ಬೌಲಿಂಗ್ ಮಾಡುವುದು ಎಂದರೆ ನನಗೆ ಪಂಚಪ್ರಾಣ. ಶಾಲಾ ದಿನಗಳಿಂದಲೇ ನಾನು ಇದನ್ನು ಪಾಲಿಸಿಕೊಂಡು ಬಂದಿದ್ದೇನೆ. ಈ ಬಗ್ಗೆ ನಾನು ಯಾವತ್ತೂ ರಾಜಿ ಆಗಲಾರೆ

–ಇಂಗ್ಲೆಂಡ್ ವಿರುದ್ಧದ ಏಕದಿನ ಕ್ರಿಕೆಟ್ ಸರಣಿಗೆ ಮುನ್ನ ವೇಗಿ ವರುಣ್ ಆ್ಯರನ್ ಹೇಳಿದ ಮಾತಿದು. ವಾಂಖೇಡೆ ಕ್ರೀಡಾಂಗಣದಲ್ಲಿ ಭಾನುವಾರ ಚೊಚ್ಚಲ ಪಂದ್ಯದಲ್ಲಿಯೇ ಮೂರು ವಿಕೆಟ್ ಪಡೆದು ಮಿಂಚಿದ ಆ್ಯರನ್ ಬೆಂಗಳೂರಿನ ಜೈನ್ ವಿವಿ ವಿದ್ಯಾರ್ಥಿ. ಅವರು ದ್ವಿತೀಯ ಬಿಎನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ತಮ್ಮ ಹೆಚ್ಚಿನ ದಿನಗಳನ್ನು ಅವರು ಉದ್ಯಾನ ನಗರಿಯ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ)ಯಲ್ಲಿ ವ್ಯಯಿಸಿದ್ದಾರೆ.

ಜಾರ್ಖಂಡ್ ಮೂಲದ ವರುಣ್ ಸದ್ಯ ಭಾರತ ಕ್ರಿಕೆಟ್‌ನ ಅತಿ ವೇಗದ ಬೌಲರ್. ವಿಜಯ ಹಜಾರೆ ಟ್ರೋಫಿ ಟೂರ್ನಿಯಲ್ಲಿ ಜಾರ್ಖಂಡ್ ತಂಡವನ್ನು ಪ್ರತಿನಿಧಿಸಿದ್ದ ಅವರು 153.4 ಕಿ.ಮೀ. ವೇಗದಲ್ಲಿ ಬೌಲ್ ಮಾಡಿ ಗಮನ ಸೆಳೆದಿದ್ದರು. ಅದು ಭಾರತದ ಬೌಲರ್‌ಗಳ ಮಟ್ಟಿಗೆ ದಾಖಲೆ ಕೂಡ.

ಇಂಗ್ಲೆಂಡ್ ಪ್ರವಾಸದ ವೇಳೆ ವರುಣ್ ಭಾರತ ತಂಡದಲ್ಲಿದ್ದರು. ಆದರೆ ಆಡಲು ಅವರಿಗೆ ಅವಕಾಶ ಲಭಿಸಿರಲಿಲ್ಲ. ಸ್ವದೇಶದಲ್ಲಿ ನಡೆಯುತ್ತಿರುವ ಈ ಸರಣಿಯಲ್ಲಿ ಉಮೇಶ್ ಯಾದವ್ ಗಾಯಗೊಂಡ ಕಾರಣ ಆ್ಯರೋನ್‌ಗೆ ನಾಲ್ಕನೇ ಪಂದ್ಯದಲ್ಲಿ ಸ್ಥಾನ ಸಿಕ್ಕಿತು.

ಆ ಅವಕಾಶವನ್ನು 21ರ ಹರೆಯದ ವರುಣ್ (6.1–1–24–3) ಹಣ್ಣಾಗಿಸಿಕೊಂಡರು. ಪದಾರ್ಪಣೆಯಲ್ಲಿಯೇ ಗುಡುಗಿದ ಈ ವೇಗಿ ಮೂರು ವಿಕೆಟ್ ಕಬಳಿಸಿದರು. ಬಾರ್ಥ್‌ವಿಕ್, ಮೀಕರ್ ಹಾಗೂ ಬ್ರೆಸ್ನನ್ ವಿಕೆಟ್ ಪಡೆದು ಮಿಂಚಿದರು. ಮೂರೂ ಮಂದಿಯನ್ನು ಬೌಲ್ಡ್ ಮಾಡಿದ್ದು ವಿಶೇಷ. ಎರಡನೇ ಸ್ಪೆಲ್‌ನಲ್ಲಿ ಅವರು ಕೇವಲ 10 ರನ್ ನೀಡಿ 3 ಕಬಳಿಸಿದರು.